ಸಭೆಗೆ ಮಾಹಿತಿ ನೀಡದ ಆರೋಗ್ಯಾಧಿಕಾರಿ ವಿರುದ್ಧ ಸದಸ್ಯರ ಆಕ್ರೋಶ

ಅರಕಲಗೂಡು: ಸರ್ಕಾರಿ ಆಸ್ಪತ್ರೆಗಳಲ್ಲಿ ಅನುದಾನ ಖರ್ಚು ಮಾಡಿದ ದಾಖಲೆಗಳನ್ನು ಕೇಳಿದರೆ ತಾಲೂಕು ಆರೋಗ್ಯಾಧಿಕಾರಿ ಡಾ.ಸ್ವಾಮಿಗೌಡ ಉದ್ಧಟತನದಿಂದ ವರ್ತಿಸಿ ಜನಪ್ರತಿನಿಧಿಗಳಿಗೆ ಅಗೌರವ ತೋರುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿ ತಾ.ಪಂ. ಸದಸ್ಯರು ಸಾಮಾನ್ಯ ಸಭೆ ಬಹಿಷ್ಕರಿಸಿ ಕೆಲ ಕಾಲ ಹೊರ ಹೋದ ಪ್ರಸಂಗ ಜರುಗಿತು.

ಅಧ್ಯಕ್ಷೆ ವೀಣಾ ಮಂಜುನಾಥ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಸದಸ್ಯ ವೀರಾಜು ಮಾತನಾಡಿ, ತಾಲ್ಲೂಕಿನ ಆರೋಗ್ಯ ಕೇಂದ್ರಗಳಲ್ಲಿ ಸರ್ಕಾರಿ ಅನುದಾನ ವೆಚ್ಚ ಮಾಡಿದ ನಡಾವಳಿ, ಓಚರ್‌ಗಳನ್ನು ಒದಗಿಸಬೇಕು ಎಂದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಸ್ವಾಮಿಗೌಡ ಅವರು, ಎಲ್ಲ ಓಚರ್‌ಗಳನ್ನು ಒದಗಿಸುವ ಅವಶ್ಯಕತೆ ಇಲ್ಲ, ನಿಮ್ಮ ಕ್ಷೇತ್ರಕ್ಕೆ ಬೇಕಾದ ಮಾಹಿತಿ ಕೇಳಿ. ಒಟ್ಟು80 ಸಾವಿರ ಓಚರ್ ಪ್ರತಿಗಳಿದ್ದು, ಅವುಗಳನ್ನು ಜೆರಾಕ್ಸ್ ಮಾಡಿಸಲು ಹಣ ಯಾರು ಕೊಡುತ್ತಾರೆ? ಹಣ ದುರುಪಯೋಗ ಆಗಿದ್ದರೆ ಈ ಬಗ್ಗೆ ತನಿಖೆ ನಡೆಸಿ ಕ್ರಮ ಕೈಗೊಳ್ಳಲಿ ಎಂದು ಏರು ಧ್ವನಿಯಲ್ಲಿ ವೇದಿಕೆ ಮುಂಭಾಗ ಬಂದು ಉತ್ತರಿಸಿದರು.

ಈ ಹಂತದಲ್ಲಿ ಉಪಾಧ್ಯಕ್ಷ ನಾಗರಾಜು, ಜಿ.ಪಂ. ಸದಸ್ಯ ರವಿ ಅವರು, ಸಭೆಗೆ ಮಾಹಿತಿ ನೀಡಲು ನಿರಾಕರಿಸಿದ ಆರೋಗ್ಯಾಧಿಕಾರಿಗಳ ಹೇಳಿಕೆ ದಾಖಲಿಸಿ ಮೇಲಾಧಿಕಾರಿಗಳಿಗೆ ವರದಿ ಸಲ್ಲಿಸುವಂತೆ ನಿರ್ಣಯ ಅಂಗೀಕರಿಸಬೇಕು ಎಂದು ಒತ್ತಾಯಿಸಿದರು.

ಮಾಹಿತಿ ಕೇಳಿದರೆ ಡಾ.ಸ್ವಾಮಿಗೌಡ ಅವರು ವೇದಿಕೆ ಮುಂಭಾಗ ಬಂದು ಜನಪ್ರತಿನಿಧಿಗಳನ್ನೇ ಬೆದರಿಸುತ್ತಾರೆ. ಜನಪ್ರತಿನಿಧಿಗಳಿಗೆ ಗೌರವ ಸಿಗದ ಸಭೆಯಲ್ಲಿ ನಮಗೇನು ಕೆಲಸ ಎಂದು ಕೆಲ ಸದಸ್ಯರು ಸಭೆ ಬಹಿಷ್ಕರಿಸಿ ಹೊರ ಹೋಗಲು ಮುಂದಾದರು.

ಕಳೆದ ಎರಡು ವರ್ಷಗಳಿಂದ ಮಾಹಿತಿ ನೀಡದೆ ಡಾ.ಸ್ವಾಮಿಗೌಡ ಅವರು ಜನಪ್ರತಿನಿಧಿಗಳ ಮಾತಿಗೆ ಬೆಲೆ ಕೊಡುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿ ಅಧ್ಯಕ್ಷೆ ವೀಣಾ ಮಂಜುನಾಥ್ ಮತ್ತು ಕೆಲ ಸದಸ್ಯರು ಸ್ವಲ್ಪ ಸಮಯ ಸಭೆ ಬಹಿಷ್ಕರಿಸಿ ಹೊರ ನಡೆದರು. ನಂತರ ಜಿ.ಪಂ. ಸದಸ್ಯ ರೇವಣ್ಣ, ಸಾಮಾಜಿಕ ಸ್ಥಾಯಿ ಸಮಿತಿ ಅಧ್ಯಕ್ಷ ಪುಟ್ಟರಾಜು ಮತ್ತಿತರರು ಮನವೊಲಿಸಿ ಸಭೆಗೆ ವಾಪಸ್ಸು ಕರೆತಂದರು.

ಅಕ್ಷರ ದಾಸೋಹ ಊಟಕ್ಕಾಗಿ ತಾಲ್ಲೂಕಿನ ಎಲ್ಲ ಶಾಲೆಗಳಿಗೆ ಹುಳು ಬಿದ್ದ ಬೇಳೆ ಸರಬರಾಜು ಮಾಡಲಾಗುತ್ತಿದೆ. ಈ ಕುರಿತು ಮಾಹಿತಿ ಪಡೆಯಲು ಅಕ್ಷರ ದಾಸೋಹ ಅಧಿಕಾರಿ ಸಭೆಗೆ ಗೈರು ಹಾಜರಾಗಿದ್ದು, ಇಲಾಖೆ ಸಹಾಯಕರನ್ನು ಕಳುಹಿಸಿದ್ದಾರೆ. ಕಳಪೆ ಆಹಾರ ನೀಡಿ ಮಕ್ಕಳ ಆರೋಗ್ಯ ಹಾಳು ಮಾಡಲಾಗುತ್ತಿದೆ ಎಂದು ಉಪಾಧ್ಯಕ್ಷ ನಾಗರಾಜು, ಸದಸ್ಯ ವೀರಾಜು, ಜಿ.ಪಂ. ಸದಸ್ಯ ರವಿ ಅವರು ಹುಳು ಬಿದ್ದ ಬೇಳೆ ಪ್ರದರ್ಶಿಸಿ ಆಕ್ರೋಶ ವ್ಯಕ್ತಪಡಿಸಿದರು.

ತಾಲ್ಲೂಕಿನಲ್ಲಿ ಕೆಟ್ಟಿರುವ ವಿದ್ಯುತ್ ಪರಿವರ್ತಕಗಳನ್ನು ಬದಲಿಸದೆ ದೀರ್ಘ ಕಾಲದವರೆಗೆ ಸತಾಯಿಸಿ ರೈತರಿಗೆ ಭಾರಿ ಕಿರುಕುಳ ನೀಡಲಾಗುತ್ತಿದೆ. ಕುಡಿಯುವ ನೀರಿನ ಪೂರೈಕೆಗೆ ನಿರಂತರ ಜ್ಯೋತಿ ವಿದ್ಯುತ್ ಸಂಪರ್ಕ ನೀಡದೇ ನಿರ್ಲಕ್ಷಿಸಲಾಗುತ್ತಿದೆ ಎಂದು ಸದಸ್ಯರಾದ ನಿಂಗೇಗೌಡ, ಸೂರೇಗೌಡ, ಕೃಷ್ಣೇಗೌಡ, ವೀರಾಜು, ಸರಿತಾ, ಜಿ.ಪಂ. ಸದಸ್ಯ ರವಿ, ರೇವಣ್ಣ ಹಾಗೂ ವಡ್ಡರಹಳ್ಳಿ ಗ್ರಾ.ಪಂ. ಸದಸ್ಯ ಕೃಷ್ಣೇಗೌಡ ಅವರು ಸೆಸ್ಕ್ ಇಂಜಿನಿಯರ್ ವಿರುದ್ಧ ಹರಿಹಾಯ್ದರು.

ಬಂಡಿಚಿಕ್ಕನ ಕೊಪ್ಪಲಿನಲ್ಲಿ ವಿದ್ಯುತ್ ಇಲ್ಲದೆ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದ್ದು, ಶೀಘ್ರವೇ ಬಗೆಹರಿಸಬೇಕು. ಇಲ್ಲವಾದರೆ ಸೆಸ್ಕ್ ಕಚೇರಿಗೆ ಮುತ್ತಿಗೆ ಹಾಕುವುದಾಗಿ ರವಿ, ಸೆಸ್ಕ್ ಇಂಜಿನಿಯರ್ ಪುಟ್ಟಣ್ಣಯ್ಯ ಅವರನ್ನು ಆಗ್ರಹಿಸಿದರು.

ಸದಸ್ಯರಾದ ನಿಂಗೇಗೌಡ, ಸರಿತಾ, ಉಪಾಧ್ಯಕ್ಷ ನಾಗರಾಜು, ಜಿ.ಪಂ. ಸದಸ್ಯ ರೇವಣ್ಣ , ರವಿ ಮಾತನಾಡಿ, ತೋಟಗಾರಿಕೆ ಇಲಾಖೆ ವತಿಯಿಂದ ದೊರೆಯುವ ಸವಲತ್ತುಗಳ ಕುರಿತು ರೈತರಿಗಾಗಲಿ, ಜನಪ್ರತಿನಿಧಿಗಳಿಗೆ ಸರಿಯಾದ ಮಾಹಿತಿ ನೀಡುತ್ತಿಲ್ಲ. ಫಲಾನುಭವಿಗಳ ಆಯ್ಕೆಯನ್ನು ತಾ.ಪಂ. ಗಮನಕ್ಕೆ ತರದೆ ಬೇಕಾಬಿಟ್ಟಿ ಆಯ್ಕೆ ಮಾಡಲಾಗುತ್ತಿದೆ. ತೆಂಗು ಬೆಳೆ ಪರಿಹಾರ ವಿತರಣೆ ಕ್ರಮಬದ್ಧವಾಗಿ ನಡೆಸಿಲ್ಲ. ಬೆಳೆ ಬೆಳೆಯದವರಿಗೂ ಪರಿಹಾರ ನೀಡಿ ಲೋಪ ಎಸಗಲಾಗಿದೆ ಎಂದು ದೂರಿದರು.

ಗ್ರಾ.ಪಂ. ವ್ಯಾಪ್ತಿಯಲ್ಲಿ ವಾರ್ಡ್ ಸಭೆ, ಗ್ರಾಮ ಸಭೆಗಳನ್ನು ನಿಯಮಿತವಾಗಿ ನಡೆಸದೆ ಸ್ಥಳೀಯ ಜನಪ್ರನಿಧಿಗಳ ಗಮನಕ್ಕೆ ತರದೆ, ವಸತಿ ಸೌಲಭ್ಯ ಸೇರಿದಂತೆ ಸರ್ಕಾರದ ಸವಲತ್ತುಗಳನ್ನು ಅನರ್ಹ ಫಲಾನುಭವಿಗಳಿಗೆ ನೀಡಲಾಗುತ್ತಿದೆ ಎಂದು ಸದಸ್ಯರಾದ ನಿಂಗೇಗೌಡ, ಕೃಷ್ಣೇಗೌಡ ದೂರಿದರು.

ಎಲ್ಲ 36 ಗ್ರಾ.ಪಂ. ಪಿಡಿಓಗಳ ಸಭೆ ನಡೆಸಿ ಈ ಕುರಿತು ಕ್ರಮ ಕೈಗೊಳ್ಳುವುದಾಗಿ ಅಧ್ಯಕ್ಷೆ ವೀಣಾ ಮಂಜುನಾಥ್ ಸಭೆಗೆ ತಿಳಿಸಿದರು.

ಕಾಂಗ್ರೆಸ್ ಪ್ರಾಥಮಿಕ ಸದಸ್ಯತ್ವಕ್ಕೆ ಬಿ.ಕೆ.ಚಂದ್ರಕಲಾ ರಾಜಿನಾಮೆ

ಹಾಸನ : ಬಿ.ಕೆ.ಚಂದ್ರಕಲಾ ಅವರು ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯತ್ವಕ್ಕೆ ರಾಜಿನಾಮೆ ಸಲ್ಲಿಸಿದ್ದಾರೆ.

ಪಕ್ಷದ ರಾಜ್ಯಾಧ್ಯಕ್ಷ ಡಾ||ಜಿ.ಪರಮೇಶ್ವರ್‌ಗೆ ರಾಜಿನಾಮೆ ಪತ್ರವನ್ನು ಅವರು ನೀಡಿದ್ದಾರೆ.

ಪಕ್ಷದ ವಿವಿಧ ಘಟಕಗಳಲ್ಲಿ ಕೆಲಸ ಮಾಡಿದ್ದೆ. ಆದರೆ ನನಗೆ ವಿಧಾನಸಭೆ ಚುನಾವಣೆ, ನಿಗಮ ಮಂಡಳಿ ನೇಮಕಾತಿ, ಕೆ.ಪಿ.ಸಿ.ಸಿ. ಪದಾಧಿಕಾರಿಗಳ ಪಟ್ಟಿಯಲ್ಲಿಯೂ ಅವಕಾಶ ನೀಡಿಲ್ಲ ಎಂದು ಅವರು ತಿಳಿಸಿದ್ದಾರೆ.

ಪಕ್ಷದಲ್ಲಿ ಉಸಿರು ಕಟ್ಟುವ ವಾತಾವರಣ ಇದೆ. ಮುಕ್ತ ಮನಸ್ಸಿನಿಂದ ಕೆಲಸ ಮಾಡಲು ಸಾಧ್ಯವಾಗದ ಕಾರಣ ಪ್ರಾಥಮಿಕ ಸದಸ್ಯತ್ವಕ್ಕೆ ರಾಜಿನಾಮೆ ನೀಡಿದ್ದೇನೆ ಎಂದು ಅವರು ವಿವರಿಸಿದ್ದಾರೆ.

ಕಾನೂನು ಸೇವಾ ಆಯೋಗದ ಅಧ್ಯಕ್ಷರ ಪ್ರವಾಸ

ಹಾಸನ : ಕಾನೂನು ಸೇವಾ ಆಯೋಗದ ಅಧ್ಯಕ್ಷರಾದ ನಾಡೋಜ ಡಾ.ನ್ಯಾಯಮೂರ್ತಿ ಎಸ್.ಆರ್ ನಾಯಕ್ ಅವರು ಜ.12 ರಂದು ಮಧ್ಯಾಹ್ನ 2 ಗಂಟೆಗೆ ಅರಸೀಕೆರೆಗೆ ಆಗಮಿಸಿ ಬಾರ್ ಅಸೋಸಿಯೆಷನ್ ವತಿಯಿಂದ ನ್ಯಾಯಾಲಯ ಆವರಣದಲ್ಲಿ ಏರ್ಪಡಿಸಿರುವ ಸಂವಾದ ಕಾರ್ಯಕ್ರಮದಲ್ಲಿ ಮುಖ್ಯ ಅಥಿತಿಗಳಾಗಿ ಭಾಗವಹಿಸಲಿರುವರು, ನಂತರ ಸಂಜೆ 4 ಗಂಟೆಗೆ ಅರಸೀಕೆರೆಯಿಂದ ತೆರಳುವರು.

ಸಮಾಜ ಸುಧಾರಕರ ಮೌಲ್ಯ ಮೈಗೂಡಿಸಿಕೊಂಡರೆ ಅಭಿವೃದ್ಧಿ ಸಾಧ್ಯ

ಹಾಸನ: ಸಮಾಜ ಸುಧಾರಕರ ಆದರ್ಶ ಗುಣಗಳು, ಮಾನವೀಯ ಮೌಲ್ಯಗಳನ್ನು ಪ್ರತಿಯೊಬ್ಬಪ್ರಜೆಯೂ ಮೈಗೂಡಿಸಿಕೊಂಡಿದ್ದಲ್ಲಿ ಸಮಾಜದ ಅಭಿವೃದ್ಧಿ ಸಾಧ್ಯ ಎಂದು ಎಐಡಿಎಸ್‌ಓ ಜಿಲ್ಲಾ ಉಪಾಧ್ಯಕ್ಷ ರವಿನಂದನ್ ಅಭಿಪ್ರಾಯಪಟ್ಟರು.

ನಗರದ ಸರ್ಕಾರಿ ಕಲಾ, ವಾಣಿಜ್ಯ ಮತ್ತು ಸ್ನಾತಕೋತ್ತರ ಕಾಲೇಜಿನ (ಸ್ವಾಯತ್ತ) ಸಭಾಂಗಣದಲ್ಲಿ ಗುರುವಾರ ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ಸ್ ವತಿಯಿಂದ ಆಯೋಜಿಸಿದ್ದ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 122ನೇ ಜನ್ಮ ವಾರ್ಷಿಕೋತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಸುಭಾಷ್ ಚಂದ್ರ ಬೋಸ್ ಅವರು ಚಿಕ್ಕ ವಯಸ್ಸಿನಿಂದಲೇ ದೇಶ ಪ್ರೇಮ, ನಾಡಪ್ರೇಮ, ಸಮಾಜ ಪ್ರೇಮದಂತಹ ಆದರ್ಶ ಗುಣಗಳನ್ನು ಮೈಗೂಡಿಸಿಕೊಂಡಿದ್ದವರು. ವಿದ್ಯಾರ್ಥಿ ದೆಸೆಯಲ್ಲಿದ್ದಾಗಲೇ ಹೋರಾಟದತ್ತ ಮುಖ ಮಾಡಿದವರು. ಅನ್ಯಾಯ ಕಂಡಲ್ಲಿ ದಿಟ್ಟಿಸಿ ನಿಲ್ಲುತ್ತಿದ್ದಂತಹ ಧೀಮಂತ ವ್ಯಕ್ತಿಯಾಗಿದ್ದರು. ವಿದ್ಯಾಭ್ಯಾಸದಲ್ಲಿಯೂ ತಮ್ಮ ಉತ್ತಮ ಛಾಪು ಮೂಡಿಸಿದ್ದ ನೇತಾಜಿ ಅವರು ತಮ್ಮ ವಿದ್ಯಾಭ್ಯಾಸದುದ್ದಕ್ಕೂ ರ‍್ಯಾಂಕ್ ಶ್ರೇಣಿಯಲ್ಲಿ ತೇರ್ಗಡೆಯಾಗುತ್ತಿದ್ದವರು. ಅಧಿಕಾರದ ಚಪಲವಿಲ್ಲದ ಇವರು ಅತ್ಯುತ್ತಮ ಅಧಿಕಾರಯುತ ಹುದ್ದೆಗಳು ತಮ್ಮಲ್ಲಿಗೆ ಅರಸಿ ಬಂದಿದ್ದರೂ ತಮ್ಮ ಏಕಮುಖ ನಿಲುವಾದ ಸಾಮಾಜಿಕ ಸುಧಾರಣೆಯತ್ತ ಮುಖ ಮಾಡಿದರು ಎಂದರು.

ತಮ್ಮ ಇಡೀ ಜೀವನವನ್ನು ಸಾಮಾಜಿಕ ಹೋರಾಟದಲ್ಲಿ ತೊಡಗಿಸಿಕೊಂಡು ಸಮಾಜದ ಅಭಿವೃದ್ಧಿಗೆ, ಸಮಾಜದಲ್ಲಿ ನಡೆಯುತ್ತಿರುವ ಅನ್ಯಾಯವನ್ನು ಹೊರಗೆಡವುವಲ್ಲಿ ಜೀವ ಸವೆಸಿದವರು. ವಿದ್ಯಾರ್ಥಿಗಳು ಇವರ ಆದರ್ಶ ಗುಣಗಳು, ಮಾನವೀಯ ಮೌಲ್ಯಗಳನ್ನು ಮೈಗೂಡಿಸಿಕೊಂಡಲ್ಲಿ ಉತ್ತಮ ಸಮಾಜವನ್ನು ಕಟ್ಟಿ ಬೆಳೆಸಲು ಸಾಧ್ಯ ಎಂದು ಹೇಳಿದರು.

ಕಾಲೇಜಿನ ಡೀನ್ ಪ್ರೊ.ವೈ.ಪಿ. ಮಲ್ಲೇಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಅಧೀಕ್ಷಕ ಸತ್ಯಮೂರ್ತಿ, ಪ್ರಾಧ್ಯಾಪಕರಾದ ಪುಟ್ಟರಾಜು, ದೇವರಾಜು, ರಮೇಶ್, ಉಪನ್ಯಾಸಕಿ ಎ.ರಶ್ಮಿ ಹಾಗೂ ಇನ್ನಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸದಾಶಿವ ಆಯೋಗ ಜಾರಿಗೆ ಒತ್ತಾಯ

(1ನೇ ಪುಟದಿಂದ...) ಎಲ್ಲ ರಾಜಕೀಯ ಪಕ್ಷಗಳು ಅಸ್ಪೃಶ್ಯತೆಯನ್ನು ಹೋಗಲಾಡಿಸುತ್ತೇವೆ ಎಂದು ಕೇವಲ ಭಾಷಣ ಮಾಡುತ್ತಾರೆ. ಆದರೆ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಜಾರಿಗೊಳಿಸಲು ಎಲ್ಲ ಪಕ್ಷದ ನಾಯಕರು ವಿಫಲರಾಗಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ಕೂಡಲೇ ವರದಿಯನ್ನು ಕೇಂದ್ರ ಸರಕಾರಕ್ಕೆ ವರ್ಗೀಕರಣ ಮಾಡಲು ಶಿಫಾರಸ್ಸು ಮಾಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ದಲಿತ ಮುಖಂಡರಾದ ಹೆಚ್.ಕೆ.ಸಂದೇಶ್, ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಚಾಲಕ ಎಂ.ಸೋಮಶೇಖರ್, ಮಾದಿಗ ದಂಡೋರ ಜಿಲ್ಲಾಧ್ಯಕ್ಷ ಟಿ.ಆರ್. ವಿಜಯಕುಮಾರ್, ಗಂಗಾಧರ್ ಬಹುಜನ್, ರವಿಕುಮಾರ್ ಕೋರವಂಗಲ, ಆರ್. ಹೇಮಂತ್ ಇತರರು ಭಾಗವಹಿಸಿದ್ದರು.

ನಿಮ್ಮ ಮನೆ ಮೇಲ್ಛಾವಣಿ ಮೇಲೆ ಒಂದಿಷ್ಟು ನೀರಿಟ್ಟು ಪಕ್ಷಿಗಳ ಬಾಯಾರಿಕೆ ತಣಿಸಿ

ಬೇಕಾಗಿದ್ದಾರೆ

ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ನುರಿತ ಹುಡುಗರು ಹಾಗೂ ಹುಡುಗಿಯರು ಬೇಕಾಗಿದ್ದಾರೆ. ಸ್ಥಳ : ಹಾಸನ

ಸಂಪರ್ಕಿಸಿ :
9164210699

PART TIME JOB

Models required for saree PhotoShoot @ Hassan. age : 18-35, height : 5.2'' Plus

Contact
9164210699

ವಾಣಿಜ್ಯ ಜಾಗ ಮಾರಾಟಕ್ಕಿದೆ

ಹಾಸನ- ಮಂಗಳೂರು ಬೈಪಾಸ್, ಬಿಟ್ಟಗೋಡನಹಳ್ಳಿ ಸರ್ಕಲ್‌ನಲ್ಲಿ ಬಿ.ಎಂ. ರಸ್ತೆಗೆ ಹೊಂದಿಕೊಂಡಂತೆ 70★220 ಅಡಿ ಅಳತೆಯ ವಾಣಿಜ್ಯ ಜಾಗ ಮಾರಾಟಕ್ಕಿದೆ.

ಸಂಪರ್ಕಿಸಿ
8970088882

ಬೇಕಾಗಿದ್ದಾರೆ

ಸ್ಟೇಟ್‌ಬ್ಯಾಂಕ್ ಆಫ್ ಇಂಡಿಯಾ ಗ್ರೂಪ್ಸ್‌ನಲ್ಲಿ **UNIT MANAGER/ ADVISOR** ಆಗಿ ಕಾರ್ಯ ನಿರ್ವಹಿಸಲು ನಿರುದ್ಯೋಗಿ, ಯುವಕ, ಯುವತಿ, ಗೃಹಿಣಿಯರು ಮತ್ತು ನಿವೃತ್ತಿದಾರರು ಬೇಕಾಗಿದ್ದಾರೆ. ವಿದ್ಯಾರ್ಹತೆ: **S.S.L.C** ಮತ್ತು **P.U.C** ಪಾಸ್ ವಯಸ್ಸು: 26ವರ್ಷ ಮೇಲ್ಪಟ್ಟು ಆಸಕ್ತರು ಕೂಡಲೇ ಸಂಪರ್ಕಿಸಿ

Mob: 9972869878

ನಗರದ ಜನತೆಗೆ ಹೊಸ ವರ್ಷ ಹಾಗೂ ಸಂಕ್ರಾಂತಿಯ ಶುಭಾಶಯಗಳು

* SINGAPORE - MALAYSIA - THAILAND
10 Days - Group
Departure : 15th feb,10th mar-2018 (Best Price)
*THAILAND - 4 NIGHTS / 5 Days
Exclusive women's Group -Departure :28th April - 2018
*TREASURES OF EUROPE-14 NIGHTS / 15 Days
Departure :9th May - 2018

OTA OASIS TOURS
Contact: 9242876889, 9448166988

ಭಗವಾನ್ ಕಾಫಿ
Bhagavan Coffee

ನಮ್ಮಲ್ಲಿ ಉತ್ತಮವಾದ **ತಾಜಾ** ಕಾಫಿಪುಡಿ **ಮಾತ್ರ,** ದೊರೆಯುತ್ತದೆ.

ಕಾಫಿಪುಡಿ ತಯಾರಿಕೆಯಲ್ಲಿ 50 ವರ್ಷಗಳ ಅನುಭವ
ತಾಜಾ ಕಾಫಿ ಪುಡಿಗೆ ಇಂದೇ ಭೇಟಿ ಕೊಡಿ
ನಮ್ಮಲ್ಲಿ ASSAM Tea-ಪುಡಿ ದೊರೆಯುತ್ತದೆ

ನಮ್ಮಲ್ಲಿ ಕಾಫಿ ಬೀಜವನ್ನು ಹದವಾಗಿ ಹುರಿದು ಪುಡಿ ಮಾಡಿಕೊಡಲಾಗುತ್ತದೆ.

ಭಗವಾನ್ ಕಾಫಿ ವರ್ಕ್ಸ್, ಭಗವಾನ್ ಬಿಲ್ಡಿಂಗ್, ಕಟ್ಟಿನಕೆರೆ ಮಾರುಕಟಟ್ಟೆ
ಹಾಸನ. ಫೋ: 08172-269162

ನಿಧನ

ಹಾಸನ: ನಗರಸಭೆ ಮಾಜಿ ಸದಸ್ಯೆ, ಅಕ್ಕನ ಬಳಗದ ಅಧ್ಯಕ್ಷೆ ಹಾಗೂ ಭಾರತೀಯ ಜನತಾ ಪಕ್ಷದ ಮಹಿಳಾ ಘಟಕದ ವಿಭಾಗದ ಪದಾಧಿಕಾರಿಯಾಗಿದ್ದ ಕೆ.ಟಿ.ಭ್ರಮರಾಂಬ ಗುರುವಾರ ನಿಧನರಾದರು.

ಅವರಿಗೆ 79 ವರ್ಷ ವಯಸ್ಸಾಗಿತ್ತು. ಇವರು ಇಬ್ಬರು ಗಂಡು ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಒಂದು ವರ್ಷದಿಂದ ಶ್ವಾಸಕೋಶ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರು ಚಿಕಿತ್ಸೆ ಪಡೆಯುತ್ತಿದ್ದರು. ಈಗ್ಗೆ 15 ದಿವಸದ ಹಿಂದೆ ಚಿಕಿತ್ಸೆಗಾಗಿ ಕೆ.ಆರ್.ಪುರಂನಲ್ಲಿರುವ ಸಂಜೀವಿನಿ ಆಸ್ಪತ್ರೆಗೆ ದಾಖಲಾಗಿದ್ದರು. ಗುರುವಾರ ಸಂಜೆ 6 ಗಂಟೆ ವೇಳೆಯಲ್ಲಿ ನಿಧನರಾದರು.

ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 3 ಗಂಟೆಗೆ ನಗರದ ವೀರಶೈವ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ : ಕೆ.ಟಿ.ಭ್ರಮರಾಂಬ ನಿಧನಕ್ಕೆ ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ಕಟ್ಟಾಯ ಶಿವಕುಮಾರ್ ಸಂತಾಪ ವ್ಯಕ್ತಪಡಿಸಿದ್ದಾರೆ.

ಯಗಚಿಗೆ ಹರಿಯುತ್ತಿರುವ ಒಳಚರಂಡಿ ನೀರು!

(1ನೇ ಪುಟದಿಂದ....) ಬಿಟ್ಟಗೋಡನಹಳ್ಳಿ, ಚನ್ನಪಟ್ಟಣ ಕೆರೆ ರಾಜಕಾಲುವೆ ಮೂಲಕ ಇಲ್ಲಿಗೆ ಕಲುಷಿತ ನೀರು ಬರುತ್ತಿದೆ ಎಂದು ಈ ಸುತ್ತಮುತ್ತಲಿನ ಗ್ರಾಮಸ್ಥರು ತಮ್ಮ ಅಳಲು ತೋಡಿಕೊಳ್ಳುತ್ತಾರೆ. ಈ ಸಮಸ್ಯೆಗೆ ನಮ್ಮೆಲ್ಲ ಜನಪ್ರತಿನಿಧಿಗಳು, ಅಧಿಕಾರಿಗಳು ತುರ್ತು ಗಮನ ಹರಿಸಿ ಪರಿಹಾರ ಕಂಡುಕೊಳ್ಳಬೇಕಿದೆ.

ಇದೊಂದು ಗಂಭೀರವಾದ ವಿಚಾರ. ರಾಜಕೀಯ ಪಕ್ಷಗಳ ಮುಖಂಡರು ಹಠಕ್ಕೆ ಬಿದ್ದವರಂತೆ ಒಬ್ಬರ ವಿರುದ್ಧ ಮತ್ತೊಬ್ಬರು ಆರೋಪ-ಪ್ರತ್ಯಾರೋಪ ಮಾಡದೆ ಸಮಸ್ಯೆಗೆ ಇತಿಶ್ರೀ ಹಾಡಬೇಕಿದೆ.

ಹಿಮ್ಸ್‌ನ ಬ್ರಾಂಕೋಸ್ಕೋಪಿ ಉಪಕರಣ ಉದ್ಘಾಟನೆ

ಹಾಸನ : ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆಯ ಶ್ವಾಸಕೋಶ ವೈದ್ಯಕೀಯ ವಿಭಾಗದಲ್ಲಿ ವೀಡಿಯೋ ಬ್ರಾಂಕೋಸ್ಕೋಪಿ ಉಪಕರಣವನ್ನು ಸಂಸ್ಥೆಯ ನಿರ್ದೇಶಕ ಡಾ.ಬಿ.ಸಿ.ರವಿಕುಮಾರ್ ಉದ್ಘಾಟಿಸಿದರು.

ಸಭೆಯಲ್ಲಿ ಹಾಜರಿದ್ದ ವಿಭಾಗದ ಮುಖ್ಯಸ್ಥ ಡಾ.ಚನ್ನವೀರಪ್ಪ ಮಾತನಾಡಿ, ರಾಜ್ಯದಲ್ಲಿ ಇಲ್ಲಿಯವರೆಗೆ ಕೆಲವೇ ಪ್ರತಿಷ್ಠಿತ ಆಸ್ಪತ್ರೆಗಳಲ್ಲಿ ಮಾತ್ರ ಲಭ್ಯವಿದ್ದ ವಿಡಿಯೋ ಬ್ರಾಂಕೋಸ್ಕೋಪಿ ಉಪಕರಣವನ್ನು ಈಗ ಹಿಮ್ಸ್ ಸಂಸ್ಥೆಯಲ್ಲಿಯೂ ಅಳವಡಿಸಲಾಗಿದ್ದು, ಈ ಉಪಕರಣದಿಂದ ಶ್ವಾಸಕೋಶದ ನಾಳಗಳನ್ನು ನೇರವಾಗಿ ವೀಕ್ಷಿಸಲು, ಕಾಯಿಲೆಗಳನ್ನು ಪತ್ತೆ ಹಚ್ಚಲು ಮತ್ತು ಅವಶ್ಯಕತೆ ಇದ್ದಾಗ ಬಯೋಪ್ಸಿ ಪರೀಕ್ಷೆ ನಡೆಸಿ ರೋಗಗಳನ್ನು ಪತ್ತೆ ಹಚ್ಚಬಹುದು. ಅಲ್ಲದೆ ನ್ಯುಮೋನಿಯಾ, ಕ್ಷಯ ರೋಗ, ಶ್ವಾಸಕೋಶ ಕ್ಯಾನ್ಸರ್, ದೀರ್ಘ ಕಾಲದ ಕೆಮ್ಮು ಮತ್ತು ಹಲವಾರು ಶ್ವಾಸಕೋಶಕ್ಕೆ ಸಂಬಂಧಿಸಿದ ರೋಗಗಳನ್ನು ಪತ್ತೆ ಹಚ್ಚಲು ಉಪಯೋಗಕಾರಿಯಾಗಿದೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಕ್ಷಯ ರೋಗ ಕಾಯಿಲೆಯನ್ನು ಅತಿ ವೇಗವಾಗಿ ಕಂಡು ಹಿಡಿಯಲು ಅತ್ಯಾಧುನಿಕ ಉಪಕರಣವಾದ Gene Expert ಮತ್ತು ಕ್ಷಯರೋಗ ಚಿಕಿತ್ಸೆಗೆ ವಿಶ್ವ ಆರೋಗ್ಯ ಸಂಸ್ಥೆಯ ಹೊಸದಾದ ದಿನನಿತ್ಯದ ಚಿಕಿತ್ಸಾ ವಿಧಾನವನ್ನು (Daily DOTS Regimen) ಸಹ ಉದ್ಘಾಟಿಸಲಾಯಿತು.

ಕಾರ್ಯಕ್ರಮದಲ್ಲಿ ಮುಖ್ಯ ಆಡಳಿತಾಧಿಕಾರಿ ಎನ್.ಎಸ್. ಚಿದಾನಂದ ವೈದ್ಯಕೀಯ ಅಧೀಕ್ಷಕ ಡಾ.ಕೆ.ಶಂಕರ್, ನಿವಾಸಿ ವೈದ್ಯಾಧಿಕಾರಿ ಡಾ.ಪ್ರಸನ್ನ ಕುಮಾರ್.ಡಿ.ಜಿ, ಮತ್ತು ಜಿಲ್ಲಾ ಕ್ಷಯರೋಗ ನಿಯಂತ್ರಣ ಅಧಿಕಾರಿ ಡಾ.ಕೆ.ಎನ್.ನಾಗೇಶ್ ಆರಾಧ್ಯ ಹಾಗೂ ಎಲ್ಲಾ ವಿಭಾಗದ ಮುಖ್ಯಸ್ಥರುಗಳು ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಜಠರ-ಕರುಳು ಮತ್ತು ಯಕೃತ್ (ಲಿವರ್) ರೋಗ ಸಂಬಂಧಿತ ಕ್ಲಿನಿಕ್

ಸಾಕ್ರ ವರ್ಲ್ಡ್ ಹಾಸ್ಪಟಲ್‌ನ ಸಹಯೋಗದೊಂದಿಗೆ ಎನ್‌ಡಿಆರ್‌ಕೆ ಹಾಸ್ಪಟಲ್‌ನಲ್ಲಿ ಆಯೋಜಿಸಲಾಗಿದೆ.

ದಿನಾಂಕ : 14ನೇ ಜನವರಿ 2018
(ಪ್ರತಿ ತಿಂಗಳು – 2ನೇ ಭಾನುವಾರ)
ಸಮಯ : ಬೆಳಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯವರೆಗೆ

ಈ ಕೆಳಗಿನ ಯಾವುದೇ ಲಕ್ಷಣಗಳ ಅನುಭವ ನಿಮಗಾಗಿದೆಯೇ ?
ಕಾಮಾಲೆ । ವಾಂತಿ । ಉದರ ಮತ್ತು ಎದೆಯ ನೋವು । ಸಡಿಲವಾಗಿ ಮಲ ಹೋಗುವುದು । ಮಲದೊಂದಿಗೆ ರಕ್ತ ಹೋಗುವುದು । ಮಲಬದ್ಧತೆ । ತೂಕ ಇಳಿಕೆ । ಹಸಿವು ಕಡಿಮೆಯಾಗುವುದು । ನುಂಗಲು ಕಷ್ಟವಾಗುವುದು

ಸಮಾಲೋಚನೆಗಾಗಿ ಎನ್‌ಡಿಆರ್‌ಕೆ ಹಾಸ್ಪಿಟಲ್‌ಗೆ ಭೇಟಿ ಮಾಡಿ:
ಡಾ. ಅಮೃತೇಶ್ ಟಿ.ಎಂ.
ಎಂಬಿಬಿಎಸ್. ಎಂ.ಡಿ. (ಇಂಟರ್ನಲ್-ಮೆಡಿಸನ್),
ಡಿಎನ್‌ಬಿ-ಗ್ಯಾಸ್ಟ್ರೋಎಂಟರಾಲಜಿ ಕನ್ಸಲ್‌ಟೆಂಟ್ -ಗ್ಯಾಸ್ಟ್ರೋಎಂಟರಾಲಜಿ ಆ್ಯಂಡ್ ಹೆಪಟೋರಾಲಜಿ
ಸಾಕ್ರಾ ಇನ್ಸ್‌ಟಿಟ್ಯೂಟ್ ಆಫ್ ಡೈಜೆಸ್ಟಿವ್ ಆ್ಯಂಡ್ ಹೆಚ್‌ಪಿಬಿ ಸೈನ್ಸಸ್

ಅಂಗಾಂಗಗಳಿಗೆ ಸಂಬಂಧಿಸಿದ ಸಮಸ್ಯೆಗಳು
ಲಿವರ್ । ಮೇದೋಜೀರಕ ಗ್ರಂಥಿ । ಅನ್ನನಾಳ । ಪಿತ್ತಕೋಶ । ಹೊಟ್ಟೆ ಮತ್ತು ಕರುಳಿನ ರೋಗಗಳು

SAKRA WORLD HOSPITAL
ಅಪಾಯಿಂಟ್‌ಮೆಂಟ್‌ಗಾಗಿ ಕರೆ ಮಾಡಿ :
08172-264022 / 7899730613
ಎನ್‌ಡಿಆರ್‌ಕೆ ಹಾಸ್ಪಟಲ್

ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಗೆ ಜ. 22ರವರೆಗೆ ಕಾಲಾವಕಾಶ

ಹಾಸನ : ಹಾಸನ ಜಿಲ್ಲಾಧಿಕಾರಿ ಕಚೇರಿಯಿಂದ ಜಿಲ್ಲೆ ವ್ಯಾಪ್ತಿಯ ತಹಶೀಲ್ದಾರ್‌ಗಳೊಂದಿಗೆ ಗುರುವಾರ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ವಿಡಿಯೋ ಸಂವಾದ ನಡೆಸಿದರು,

ಚುನಾವಣಾ ಆಯೋಗವು ಮತದಾರರ ಪಟ್ಟಿಗೆ ಹೊಸದಾಗಿ ಹೆಸರು ಸೇರ್ಪಡೆಗೊಳಿಸಲು ಜ. 22ರವರೆಗೆ ಕಾಲಾವಕಾಶವನ್ನು ವಿಸ್ತರಿಸಿದ್ದು, ಈ ಬಗ್ಗೆ ವ್ಯಾಪಕ ಜಾಗೃತಿ ಮೂಡಿಸಬೇಕು ಎಂದು ಜಿಲ್ಲಾ ಚುನಾವಣಾ ಅಧಿಕಾರಿಯೂ ಆದ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ತಿಳಿಸಿದರು.

ಜಿಲ್ಲೆ ವ್ಯಾಪ್ತಿಯ ಉಪ ವಿಭಾಗಧಿಕಾರಿ ಹಾಗೂ ತಹಶೀಲ್ದಾರ್‌ಗಳೊಂದಿಗೆ ಗುರುವಾರ ವಿಡಿಯೋ ಸಂವಾದ ನಡೆಸಿದ ಜಿಲ್ಲಾಧಿಕಾರಿ, ಮತದಾರರ ನೋಂದಣಿ ಸಂದರ್ಭದಲ್ಲಿ ಯುವಜನರು, ಮಹಿಳೆಯರು ಹಾಗೂ ವಿಶೇಷ ವರ್ಗಗಳ ಜನರ ಬಗ್ಗೆ ವಿಶೇಷ ಗಮನಹರಿಸುವಂತೆ ಸಲಹೆ ನೀಡಿದರು.

ಲಭ್ಯವಿರುವ ಅಲ್ಪಾವಧಿಯಲ್ಲಿ ಪ್ರತಿಯೊಬ್ಬ ವಯಸ್ಕರೂ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಣಿ ಮಾಡಿಸಲು ಅನುವು ಆಗುವಂತೆ ನೋಂದಣಿ ಪ್ರಕ್ರಿಯೆಯನ್ನು ಚುನಾವಣಾ ಉತ್ಸವದಂತೆ ನಡೆಸಬೇಕು. ಈ ಸಂಬಂಧ ವಿವಿಧ ಜಾಗೃತಿ ಚಟುವಟಿಕೆಗಳನ್ನು ಹಮ್ಮಿಕೊಳ್ಳಬೇಕು. ಅಧಿಕಾರಿಗಳು ಪದವಿ ಕಾಲೇಜುಗಳಿಗೆ ತೆರಳಿ ನೋಂದಣಿ ಪ್ರಕ್ರಿಯೆಯನ್ನು ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಮತದಾರರ ಪಟ್ಟಿ ಪರಿಷ್ಕರಿಸಿ: ಜಿಲ್ಲೆಯ ವಿಧಾನಸಭಾ ಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ಯಾವುದೇ ನ್ಯೂನ್ಯತೆಗಳು ಇಲ್ಲದಂತೆ ಕೂಲಂಕಷವಾಗಿ ಪರಿಶೀಲಿಸಿ ಮತದಾರರ ಪಟ್ಟಿಯನ್ನು ಪರಿಷ್ಕರಿಸುವಂತೆ ನಿರ್ದೇಶನ ನೀಡಿದರು.

ಎಲ್ಲಾ ವಿಧಾನಸಭಾ ಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ಚುನಾವಣಾ ಜನಸಂಖ್ಯೆ ಅನುಪಾತ ಶೇ 69 ಮೀರಬಾರದು. ಈ ಸಂಬಂಧ ಪ್ರತಿ ಮತಗಟ್ಟೆಯಲ್ಲಿನ ಮತದಾರರ ಪಟ್ಟಿಯನ್ನು ಕೂಲಂಕಷವಾಗಿ ಪರಿಶೀಲಿಸಬೇಕು ಎಂದು ಹೇಳಿದರು.

ಮರಣ ಹೊಂದಿದವರು, ವಲಸೆ ಹೋಗಿರುವವರು ಹಾಗೂ ಪುನರಾವರ್ತನೆಗೊಂಡ ಮತದಾರರನ್ನು ಮತದಾರರ ಪಟ್ಟಿಯಲ್ಲಿ ಇಲ್ಲದಂತೆ ಅಗತ್ಯ ಕ್ರಮವಹಿಸಬೇಕು ಎಂದು ತಿಳಿಸಿದರು.

ಮೂಲಸೌಕರ್ಯ ಕಲ್ಪಿಸಿ: ಪ್ರತಿಯೊಂದು ಮತದಾನ ಕೇಂದ್ರಗಳೂ ಅಗತ್ಯ ಭೌತಿಕ ಸೌಲಭ್ಯಗಳನ್ನು ಒಳಗೊಂಡಿರುವಂತೆ ಸುವ್ಯವಸ್ಥಿತವಾಗಿ ಸಜ್ಜುಗೊಳಿಸಬೇಕು ಎಂದು ಹೇಳಿದರು.

ಪುರುಷ ಮತ್ತು ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ, ಕುಡಿಯುವ ನೀರು, ವಿಕಲಚೇತನರು ಹಾಗೂ ಹಿರಿಯ ನಾಗರಿಕ ಮತದಾರರಿಗೆ ಅನುಕೂಲ ಆಗುವಂತೆ ಇಳಿಜಾರು ವ್ಯವಸ್ಥೆ, ಮತದಾನ ವಿಭಾಗದ ಒಳಭಾಗದಲ್ಲಿ ಸಾಕಷ್ಟು ಬೆಳಕು ಲಭ್ಯವಿರುವಂತೆ ವಿದ್ಯುತ್ ವ್ಯವಸ್ಥೆ ಒದಗಿಸಬೇಕು. ಪೀಠೋಪಕರಣ, ಸಹಾಯವಾಣಿ ಕೇಂದ್ರ ಸೇರಿದಂತೆ ಇನ್ನಿತರೆ ಕನಿಷ್ಠ ಮೂಲಸೌಕರ್ಯಗಳನ್ನು ಕಲ್ಪಿಸುವ ಮೂಲಕ ಮತಗಟ್ಟೆಗಳನ್ನು ಮತದಾರರ ಸ್ನೇಹಿ ಆಗಿರುವಂತೆ ಸಿದ್ಧಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಈ ಸಂಬಂಧ ತಮ್ಮ ವ್ಯಾಪ್ತಿಯ ಪ್ರತಿಯೊಂದು ಮತಗಟ್ಟೆಗಳನ್ನು ಖುದ್ದಾಗಿ ಪರಿಶೀಲಿಸಬೇಕು. ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿರುವ ಬಗ್ಗೆ ಛಾಯಚಿತ್ರವನ್ನು ಒಳಗೊಂಡ ವರದಿಯನ್ನು ಜಿಲ್ಲಾಧಿಕಾರಿಗಳ ಕಚೇರಿಗೆ ಸಲ್ಲಿಸಬೇಕು ಎಂದು ತಹಶೀಲ್ದಾರ್‌ಗಳಿಗೆ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ನಿರ್ದೇಶನ ನೀಡಿದರು.

ಅಪರ ಜಿಲ್ಲಾಧಿಕಾರಿ ಬಿ.ಆರ್. ಪೂರ್ಣಿಮಾ, ಹಾಸನ ಉಪ ವಿಭಾಗಾಧಿಕಾರಿ ಡಾ|| ಎಚ್.ಎಲ್. ನಾಗರಾಜು ಇದ್ದರು.

ವಾಟ್ಸ್‌ಆಫ್ ಗ್ರೂಫ್ ರಚಿಸಿ: ಚುನಾವಣೆಗೆ ಸಂಬಂಧಿಸಿದ ವಿಷಯಗಳನ್ನು ಹಂಚಿಕೊಳ್ಳುವುದರ ಜೊತೆಗೆ ಮತದಾರರ ಪಟ್ಟಿಗೆ ಹೊಸದಾಗಿ ಹೆಸರು ಸೇರ್ಪಡೆ, ಪರಿಷ್ಕರಣೆ ಸೇರಿದಂತೆ ಇನ್ನಿತರೆ ಕಾರ್ಯಚಟುವಟಿಕೆಗಳ ಬಗ್ಗೆ ನಿಗಾ ವಹಿಸಲು ಅನುಕೂಲವಾಗುವಂತೆ ವೃತ್ತವಾರು, ಮತಗಟ್ಟೆ ಅಧಿಕಾರಿಗಳನ್ನು ಒಳಗೊಂಡ ವಾಟ್ಸ್‌ಆಫ್ ಗ್ರೂಫ್ ರಚಿಸುವಂತೆ ತಹಶೀಲ್ದಾರ್‌ಗಳಿಗೆ ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಸಲಹೆ ನೀಡಿದರು.

ಉಪ ವಿಭಾಗ ವ್ಯಾಪ್ತಿಯ ತಾಲ್ಲೂಕುಗಳಲ್ಲಿ ಚುನಾವಣೆಗೆ ಸಂಬಂಧಿಸಿದಂತೆ ಕೈಗೊಳ್ಳಲಾಗುತ್ತಿರುವ ಚಟುವಟಿಕೆಗಳನ್ನು ಪ್ರತಿದಿನ ಆಯಾಯ ವಿಭಾಗದ ಉಪ ವಿಭಾಗಾಧಿಕಾರಿಗಳು ಗಮನಹರಿಸಬೇಕು. ಸಲಹೆ, ಸೂಚನೆಗಳನ್ನು ನೀಡುವುದರ ಜೊತೆಗೆ ಚುನಾವಣೆಗೆ ಸಂಬಂಧಿಸಿದ ಪ್ರಕ್ರಿಯೆಗಳು ಸುಸೂತ್ರವಾಗಿ ನಡೆಯುತ್ತಿರುವ ಬಗ್ಗೆ ಗಮನಹರಿಸಬೇಕು ಎಂದು ಹೇಳಿದರು.

ಚುನಾವಣಾ ಗುರುತಿನ ಚೀಟಿ ಹೊಂದಿರುವ ಮತದಾರರು, ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಇರುವ ಬಗ್ಗೆ ಖಾತರಿಪಡಿಸಿಕೊಳ್ಳಬೇಕು. ಒಂದು ವೇಳೆ ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದಿದ್ದರೆ ಕೂಡಲೇ ನೋಂದಣಿ ಮಾಡಿಸಬೇಕು. ಗುರುತಿನ ಚೀಟಿ ಇದ್ದು ಮತದಾರರ ಪಟ್ಟಿಯಲ್ಲಿ ಹೆಸರು ಇಲ್ಲದಿದ್ದರೆ ಮತದಾನಕ್ಕೆ ಅವಕಾಶ ಇರುವುದಿಲ್ಲ ಎಂದು ರೋಹಿಣಿ ಸಿಂಧೂರಿ ತಿಳಿಸಿದ್ದಾರೆ.

Hassan Most Awaited Exhibition
13th edition
Cosmo Bazaar
Festive Collezione 2018
Exhibition 'N' Sale
Designer Sarees , Suits, Kurtis, Jewellery , Accessories & Home Decor
11 & 12
Thu
Fri
January
10:30am - 8:30pm
Venue: Hotel Southern Star, BM Road, Hassan
Contact : 9611573637 / 831041616

Printed and Published by Dr. A.C. Munivenkategowda & Owned By Snehitaru Nirvahane, Janatha Clinic, R.C. Road, Hassan, Karnataka & Printed at Snehitaru Nirvahane Printing Press, R.C. Road, Hassan, Karnataka, Published From Snehitaru NirvahanePrintingPress, Janatha Clinic, R.C. Road, Hassan -Pin:573201, Editor :R. P. Venkateshmurthy. Ph: 268494 Fax No-08172-260494
http://janathamadhyama.epapertoday.com e-mail: jm_hsn @yahoo.com siddujm@rediffmail.com